

# ದೈತ್ಯ ಆಲ!

ದೈತ್ಯಾಕಾರವಾಗಿ ಬೆಳೆದ ಆಲದ ಮರವನ್ನು ನೋಡಿದಾಗ ಇದೇನು ಕಾಡೇ ಎಂಬ ಅನುಮಾನ ಬರುವುದು ಸಹಜ. ಆದರೆ ಇದು ಕಾಡಲ್ಲ. ಇದೊಂದೇ ಮರ ಒಂದು ಕಾಡಿನ ನೋಟದ ಚಿತ್ರಣವನ್ನೇ ಸೃಷ್ಟಿಸಿಬಿಟ್ಟಿದೆ. ಮರದಿಂದ ಕೆಳಗಿಳಿದ 2800 ಬಿಳಲುಗಳು ನೆಲದಲ್ಲಿ ಬೇರೂರಿ ಮರದ ವ್ಯಾಪ್ತಿಯನ್ನು ವಿಸ್ತರಿಸಿವೆ.

ಈ ಮರವಿರುವುದು ಕೋಲ್ಕತ್ತಾದ ಆಚಾರ್ಯ ಜಗದೀಶ ಚಂದ್ರ ಬೋಸ್ ಸಸ್ಯೋದ್ಯಾನದಲ್ಲಿ. ಮೂರೂವರೆ ಎಕರೆ ಭೂಮಿಗೆ ನೆರಳು ಹಾಸಿರುವ ಅದರ ಜೀವಿತಕ್ಕೆ ನೂರೈವತ್ತು ವರ್ಷಗಳು ದಾಟಿವೆ ಎನ್ನಲಾಗಿದೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಬೀಸಿದ ಎರಡು ಚಂಡಮಾರುತಗಳಿಂದ ಮರ ಹಾನಿಗೀಡಾಗಿ ಶಿಲೀಂಧ್ರ ಆವರಿಸಿದಾಗ ಅದರ 51 ಅಡಿ ಕಾಂಡವನ್ನು ಕತ್ತರಿಸಲಾಗಿತ್ತು. ಬಳಿಕ ಆರೋಗ್ಯಕರವಾಗಿ ಬೆಳೆದ ಮರದ ಉಳಿದ ಭಾಗಗಳು ಒಂದು ಕಾಡಿನ ಹಾಗೆ ಮಾಡಿವೆ.

■ ಪ. ರಾಮಕೃಷ್ಣ ಶಾಸ್ತ್ರಿ

